ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ವಿವಿಪ/ಅಸಾಮಾನ್ಯ/84/2023-24 ದಿನಾಂಕ:14.07.2023.

ಗೆ,
ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ

ವಿಷಯ: ದಿನಾಂಕ. 07.07.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.

***

ದಿನಾಂಕ: 07.07.2023 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2 ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ,
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬೆಂ.ನ.ವಿ/ವಿವಿಪ/ಅಸಾಮಾನ್ಯ/84 /2023–24 ದಿನಾಂಕ: 13.07.2023.

ದಿನಾಂಕ 07.07.2023 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ | ಸಭಾಧ್ಯಕ್ಷರು |
| 2. | ಶ್ರೀ ಕೆ.ಎ. ತಿಪ್ಪೇಸ್ವಾಮಿ | ಸದಸ್ಯರು |
| 3. | ಡಾ. ಪ್ರೇಮ | ಸದಸ್ಯರು |
| 4. | ಡಾ. ಪಂಕಜ್ ಚೌಧರಿ | ಸದಸ್ಯರು |
| 5. | ಪ್ರೊ. ಸುಮಯಾ ಫಾತಿಮಾ | ಸದಸ್ಯರು |
| 6. | ಡಾ. ಎಂ. ಆರ್. ಲಕ್ಷ್ಮಿನಾರಾಯಣ | ಸದಸ್ಯರು |
| 7. | ಡಾ. ಎಲಿಝಾಬತ್ ಜಾಸ್ಮಿನ್ | ಸದಸ್ಯರು |
| 8. | ಶ್ರೀಮತಿ. ಡಿ. ಆರ್ ಸುಧಾ | ಸದಸ್ಯರು |
| 9. | ಡಾ. ಮಹೇಶ್ ಕುಮಾರ್ ಕೆ. ಆರ್ | ಸದಸ್ಯರು |
| 10. | ಡಾ. ಎಸ್. ಎನ್. ವೆಂಕಟೇಶ್ | ಸದಸ್ಯರು |
| 11. | ಡಾ. ಸಿ. ಎಂ. ನವೀನ್ ಕುಮಾರ್ | ಸದಸ್ಯರು |
| 12. | ಡಾ. ಸುಪ್ರೀತ್ ಕಿತ್ತನಕೆರೆ | ಸದಸ್ಯರು |
| 13. | ಡಾ. ಕೆ ಶಿವಶಂಕರ | ಸದಸ್ಯರು |
| 14. | ಡಾ. ಎಂ. ಪಾಂಡುರಂಗಪ್ಪ | ಸದಸ್ಯರು |
| 15. | ಡಾ. ಪಿ.ಆರ್. ಚೇತನ | ಸದಸ್ಯರು |
| 16. | ಡಾ. ಎಸ್ ಹರಿಪ್ರಸಾದ್ | ಸದಸ್ಯರು |
| 17. | ಡಾ. ಕೆ. ಆರ್. ಜಲಜಾ | ಸದಸ್ಯರು |
| 18. | ಡಾ. ಜ್ಯೋತಿ ವೆಂಕಟೇಶ್ | ಸದಸ್ಯರು |
| 19. | ಶ್ರೀ ಎಂ. ವೆಂಕಟೇಶ್ | ಸದಸ್ಯರು |
| 20. | ಶ್ರೀ ರಘು ಜಿ. ಪಿ, ವಿತ್ತಾಧಿಕಾರಿಗಳು | ಸದಸ್ಯರು |
| 21. | ಡಾ. ವಿ.ಲೋಕೇಶ<br>ಕುಲಸಚಿವರು (i/c) & ಕುಲಸಚಿವರು (ಮೌಲ್ಯಮಾಪನ) | ಸದಸ್ಯ<br>ಕಾರ್ಯದರ್ಶಿಗಳು |

ಕೋರಂ ಅಭಾವದ ಕಾರಣದಿಂದಾಗಿ ಮಾನ್ಯ ಕುಲಪತಿಗಳು ಸಭೆಯನ್ನು 10 ನಿಮಿಷಗಳ ಅವಧಿಗೆ ಮುಂದೂಡುವುದಾಗಿ ತಿಳಿಸಿದರು. ಹತ್ತು ನಿಮಿಷಗಳ ನಂತರ ಸಭೆಯನ್ನು ಪುನಃ ಪ್ರಾರಂಭಿಸಲಾಯಿತು.

ಕುಲಸಚಿವರು ಮಾನ್ಯ ಸಭಾಧ್ಯಕ್ಷರಿಗೆ ಮತ್ತು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಲು ಕುಲಪತಿಗಳಿಗೆ ವಿನಂತಿಸಿದರು.

****

ಮಾನ್ಯ ಕುಲಪತಿಗಳು ಸಭೆಯನ್ನು ಉದ್ದೇಶಿಸಿ ಕೆಳಗೆ ನಮೂದಿಸಿದ ಮಾಹಿತಿಗಳನ್ನು ನೀಡಿದರು.

ಕುಲಸಚಿವರಾಗಿದ್ದ ಶ್ರೀ ಎನ್. ಶ್ರೀಧರ್ ಕೆ.ಎಸ್.ಎಸ್ ರವರು ದಿನಾಂಕ 30.06.2023 ರಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚೆಸ್ಕಾಂ) ಮೈಸೂರು ಇಲ್ಲಿಗೆ ವ್ಯವಸ್ಥಾಪಕ ನಿರ್ದೇಶಕರಾಗಿ ವರ್ಗಾವಣೆ ಹೊಂದಿರುತ್ತಾರೆ. ಡಾ ವಿ. ಲೋಕೇಶ, ಕುಲಸಚಿವರು (ಮೌಲ್ಯಮಾಪನ) ರವರನ್ನು ಕುಲಸಚಿವರು (ಆಡಳಿತ) ಪ್ರಭಾರದಲ್ಲಿರಿಸಿ ಆದೇಶಿಸಲಾಗಿದೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ದ್ವಿತೀಯ ವಾರ್ಷಿಕ ಘಟಿಕೋತ್ಸವವು ದಿನಾಂಕ 10.07.2023ರ ಸೋಮವಾರ ಬೆಳಿಗ್ಗೆ 11.00 ಗಂಟೆಗೆ ನಗರದ ಅರಮನೆ ರಸ್ತೆ, ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಇಲ್ಲಿ ಜರುಗಲಿದೆ.

ಗೌರವಾನ್ವಿತ ಶ್ರೀ ಥಾವರ್ ಚಂದ್ ಗೆಹ್ಲೋಟ್, ಕರ್ನಾಟಕ ರಾಜ್ಯದ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ ರವರು ಘಟಿಕೋತ್ಸವದ ಅಧ್ಯಕ್ಷತೆ ವಹಿಸುವರು.

ಸನ್ಮಾನ್ಯ ಡಾ॥ ಎಂ. ಸಿ. ಸುಧಾಕರ, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರು ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಮ ಕುಲಾಧಿಪತಿಗಳು ಘಟಿಕೋತ್ಸವದಲ್ಲಿ ಉಪಸ್ಥಿತರಿರುವರು.

ಗೌರವಾನ್ವಿತ ಪದ್ಮಶ್ರೀ ಡಾ. ಸಿ. ಎನ್. ಮಂಜುನಾಥ್, ನಿರ್ದೇಶಕರು, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಘಟಿಕೋತ್ಸವದ ಭಾಷಣವನ್ನು ಮಾಡುವರು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ದ್ವಿತೀಯ ಘಟಿಕೋತ್ಸವದಲ್ಲಿ ವಿವಿಧ ಕ್ಷೇತ್ರದಲ್ಲಿನ ಗಣನೀಯ ಸಾಧನೆ ಮಾಡಿರುವ ಮೂವರು ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಲು ಮಾನ್ಯ ಕುಲಾಧಿಪತಿಗಳು ಅನುಮೋದನೆ ನೀಡಿರುತ್ತಾರೆ.

| | |
|---|---|
| 1. ಶ್ರೀ. ನಿಸಾರ್ ಅಹಮದ್ | ಶಿಕ್ಷಣ |
| 2. ಡಾ. ವೂಡೇ ಪಿ. ಕೃಷ್ಣ | ಸಮಾಜ ಸೇವೆ |
| 3. ಶ್ರೀಮತಿ ತಾರಿಣಿ ಚಿದಾನಂದ | ಸಾಹಿತ್ಯ ಕ್ಷೇತ್ರ |

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ದ್ವಿತೀಯ ವಾರ್ಷಿಕ ಘಟಿಕೋತ್ಸವದಲ್ಲಿ ಪದವಿ ಪಡೆಯಲು ಅರ್ಹರಾದ ವಿದ್ಯಾರ್ಥಿಗಳ ವಿವರ ಕೆಳಗಿನಂತಿದೆ.

| | |
|---|---|
| ಪದವಿ ಪಡೆಯಲು ಅರ್ಹರಾದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | **35,911** |
| ಮಹಿಳಾ ವಿದ್ಯಾರ್ಥಿಗಳ ಸಂಖ್ಯೆ | **21,239 (59.15%)** |
| ಪುರುಷ ವಿದ್ಯಾರ್ಥಿಗಳ ಸಂಖ್ಯೆ | **14,672 (40.85%)** |

ಒಟ್ಟು ಪದವಿ ಪಡೆಯಲು ಅರ್ಹರಾದ ವಿದ್ಯಾರ್ಥಿಗಳಲ್ಲಿ ಸ್ನಾತಕ (Under Graduate) ಪದವಿಗೆ ಅರ್ಹರಾದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ **29,914** ಇದ್ದು ಅವುಗಳ ವಿವರ ಕೆಳಗಿನಂತಿದೆ.

Under Graduate

| ಕಲಾ ನಿಕಾಯ | | ವಿಜ್ಞಾನ ನಿಕಾಯ | | ವಾಣಿಜ್ಯ ನಿಕಾಯ | | ಶಿಕ್ಷಣ ನಿಕಾಯ | | ಸ್ವಾಯತ್ತ ಕಾಲೇಜುಗಳು | | ಒಟ್ಟು | | ಒಟ್ಟು ಸಂಖ್ಯೆ |
|---|---|---|---|---|---|---|---|---|---|---|---|---|
| ಪುರುಷ ವಿದ್ಯಾರ್ಥಿ | ಮಹಿಳಾ ವಿದ್ಯಾರ್ಥಿ | ಪುರುಷ ವಿದ್ಯಾರ್ಥಿ | ಮಹಿಳಾ ವಿದ್ಯಾರ್ಥಿ | ಪುರುಷ ವಿದ್ಯಾರ್ಥಿ | ಮಹಿಳಾ ವಿದ್ಯಾರ್ಥಿ | ಪುರುಷ ವಿದ್ಯಾರ್ಥಿ | ಮಹಿಳಾ ವಿದ್ಯಾರ್ಥಿ | ಪುರುಷ ವಿದ್ಯಾರ್ಥಿ | ಮಹಿಳಾ ವಿದ್ಯಾರ್ಥಿ | ಪುರುಷ ವಿದ್ಯಾರ್ಥಿ | ಮಹಿಳಾ ವಿದ್ಯಾರ್ಥಿ | |
| **780** | **1,052** | **1,919** | **2,768** | **7,574** | **8,047** | **169** | **1,185** | **1,910** | **4,510** | **12,352** | **17,562** | **29,914** |

ಪದವಿ ಪಡೆಯಲು ಅರ್ಹರಾದ ವಿದ್ಯಾರ್ಥಿಗಳಲ್ಲಿ ಸ್ನಾತಕೋತ್ತರ (Post Graduate) ಪದವಿಗೆ ಅರ್ಹರಾದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ **5997** ಇದ್ದು ಅವುಗಳ ವಿವರ ಕೆಳಗಿನಂತಿದೆ.

Post Graduate

| ಕಲಾ ನಿಕಾಯ | | ವಿಜ್ಞಾನ ನಿಕಾಯ | | ವಾಣಿಜ್ಯ ನಿಕಾಯ | | ಶಿಕ್ಷಣ ನಿಕಾಯ | | ಸ್ವಾಯತ್ತ ಕಾಲೇಜುಗಳು | | ಒಟ್ಟು | | ಒಟ್ಟು ಸಂಖ್ಯೆ |
|---|---|---|---|---|---|---|---|---|---|---|---|---|
| ಪುರುಷ ವಿದ್ಯಾರ್ಥಿ | ಮಹಿಳಾ ವಿದ್ಯಾರ್ಥಿ | ಪುರುಷ ವಿದ್ಯಾರ್ಥಿ | ಮಹಿಳಾ ವಿದ್ಯಾರ್ಥಿ | ಪುರುಷ ವಿದ್ಯಾರ್ಥಿ | ಮಹಿಳಾ ವಿದ್ಯಾರ್ಥಿ | ಪುರುಷ ವಿದ್ಯಾರ್ಥಿ | ಮಹಿಳಾ ವಿದ್ಯಾರ್ಥಿ | ಪುರುಷ ವಿದ್ಯಾರ್ಥಿ | ಮಹಿಳಾ ವಿದ್ಯಾರ್ಥಿ | ಪುರುಷ ವಿದ್ಯಾರ್ಥಿ | ಮಹಿಳಾ ವಿದ್ಯಾರ್ಥಿ | |
| **191** | **247** | **213** | **606** | **1,625** | **1,583** | **7** | **55** | **284** | **1,186** | **2,320** | **3,677** | **5,997** |

ಈ ಘಟಿಕೋತ್ಸವದಲ್ಲಿ ಒಟ್ಟು 61 ವಿದ್ಯಾರ್ಥಿಗಳು ರ್‍ಯಾಂಕ್ ಪ್ರಮಾಣ ಪತ್ರಗಳನ್ನು ಸ್ವೀಕರಿಸಲಿದ್ದಾರೆ. ಈ ರ್‍ಯಾಂಕ್ ವಿಜೇತರಲ್ಲಿ 38 ವಿದ್ಯಾರ್ಥಿಗಳು, 51 ಚಿನ್ನದ ಪದಕಗಳನ್ನು ಸ್ವೀಕರಿಸಲಿದ್ದಾರೆ.

ಅವರುಗಳಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಸ್ಥಾಪಿಸಿದ 33 ಚಿನ್ನದ ಪದಕ ಮತ್ತು ನಗದು ಬಹುಮಾನಗಳನ್ನು ಸ್ನಾತಕೋತ್ತರ (Post-graduate) ವಿದ್ಯಾರ್ಥಿಗಳಿಗೆ ನೀಡಲಾಗುವುದು.

ಬಿ.ಎ., ಬಿ.ಎಸ್ಸಿ., ಬಿ.ಕಾಂ., ಬಿ.ಬಿ.ಎ., ಬಿ.ಇಡಿ., ಕೋರ್ಸುಗಳಲ್ಲಿ ಅತಿ ಹೆಚ್ಚು ಅಂಕ ಪಡೆದ 5 ಸ್ನಾತಕ (Undergraduate) ವಿದ್ಯಾರ್ಥಿಗಳಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಸ್ಥಾಪಿಸಿದ ಚಿನ್ನದ ಪದಕ ಮತ್ತು ನಗದು ಬಹುಮಾನಗಳನ್ನು ನೀಡಲಾಗುವುದು.

ವಿಶ್ವವಿದ್ಯಾನಿಲಯ ಸ್ಥಾಪಿಸಿದ ಚಿನ್ನದ ಪದಕಗಳ ಜೊತೆಗೆ ವಿವಿಧ ದಾನಿಗಳು ಸ್ಥಾಪಿಸಿರುವ ಒಟ್ಟು 13 ಚಿನ್ನದ ಪದಕಗಳನ್ನು ಸಹ ಅರ್ಹ ವಿದ್ಯಾರ್ಥಿಗಳು ಸ್ವೀಕರಿಸಲಿದ್ದಾರೆ ಎಂದು ಕುಲಪತಿಗಳು ತಿಳಿಸಿದರು. ಮಾನ್ಯ ಸದಸ್ಯರು ಘಟಿಕೋತ್ಸವ ಸಮಾರಂಭದಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿದರು. ನಂತರ ಕಾರ್ಯ ಸೂಚಿಯನ್ನು ಮಂಡಿಸಲು ಕುಲಸಚಿವರಿಗೆ ಸೂಚಿಸಿದರು.

**ವಿಷಯ ಸಂಖ್ಯೆ: 01**

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ದ್ವಿತೀಯ ವಾರ್ಷಿಕ ಘಟಿಕೋತ್ಸವದಲ್ಲಿ (2019–2022ನೇ ಸಾಲಿನ) ವಿವಿಧ ಸ್ನಾತಕ 2019–2022ನೇ ಸಾಲಿನ ಪದವಿಗಳಿಗೆ ಮತ್ತು ಸ್ನಾತಕೋತ್ತರ 2020–22ನೇ ಸಾಲಿನ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಅರ್ಹತಾ ಪಟ್ಟಿಗಳನ್ನುಅನುಮೋದಿಸುವ ಬಗ್ಗೆ.

***ಪರಾಮರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ದ್ವಿತೀಯ ವಾರ್ಷಿಕ ಘಟಿಕೋತ್ಸವ ದಿನಾಂಕ 10.07.2023 ರಂದು ನಡೆಯಲಿದೆ. ಈ ಘಟಿಕೋತ್ಸವದಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಪದವಿ ಸ್ವೀಕರಿಸಲು ಅರ್ಹರಾದ ವಿದ್ಯಾರ್ಥಿಗಳ ಅರ್ಹತಾ ಪಟ್ಟಿಗಳನ್ನು ವಿಶ್ವವಿದ್ಯಾನಿಲಯ ಪರಿನಿಯಮಾವಳಿ ಅಧ್ಯಾಯ 15 ಅನುಚ್ಛೇದ 15.1ರ ಪ್ರಕಾರ ಪರಿಗಣಿಸಲು ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ.

2020–22ರಲ್ಲಿ ಪ್ರವೇಶ ಪಡೆದ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ವಿದ್ಯಾರ್ಥಿಗಳು, ಸಂಯೋಜಿತ ಮತ್ತು ಸ್ವಾಯತ್ತ ಕಾಲೇಜುಗಳ ವಿದ್ಯಾರ್ಥಿಗಳು ಸೇರಿ ಸ್ನಾತಕೋತ್ತರ ವಿದ್ಯಾರ್ಥಿಗಳು ಆಯಾ ಕೋರ್ಸುಗಳನ್ನು ಮುಗಿಸಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಅರ್ಹರಾದ ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ದಪಡಿಸಲಾಗಿದೆ.

ಸಾರಾಂಶ ಕೆಳಕಂಡಂತಿದೆ.

Post-Graduate Students 2020 – 22

| Arts | Science | Commerce | Education | Autonomous | Total |
|---|---|---|---|---|---|
| 438 | 819 | 3,208 | 62 | 1,470 | 5,997 |

2019-22 ರಲ್ಲಿ ಸ್ನಾತಕ ಪದವಿಗಳಿಗೆ ಪ್ರವೇಶ ಪಡೆದ ವಿವಿಧ ವಿಭಾಗಗಳ ವಿದ್ಯಾರ್ಥಿಗಳು, ಸಂಯೋಜಿತ ಮತ್ತು ಸ್ವಾಯತ್ತ ಕಾಲೇಜುಗಳ ವಿದ್ಯಾರ್ಥಿಗಳು ಸೇರಿ ಸ್ನಾತಕ ವಿದ್ಯಾರ್ಥಿಗಳು ಆಯಾ ಕೋರ್ಸುಗಳನ್ನು ಮುಗಿಸಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಅರ್ಹರಾದ ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ದಪಡಿಸಲಾಗಿದೆ.

Undergraduate Students 2019 – 22

| Arts | Science | Commerce | Education | Autonomous | Total |
|---|---|---|---|---|---|
| 1,832 | 4,687 | 15,621 | 1,354 | 6,420 | 29,914 |

ಅದರಂತೆ ಸ್ನಾತಕೋತ್ತರ ಹಾಗೂ ಸ್ನಾತಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಪ್ರಥಮ ರ್‍ಯಾಂಕ್ ಮತ್ತು ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿ ಅನುಮೋದನೆಗಾಗಿ ಮಂಡಿಸಿದೆ.

ಸಾರಾಂಶ ಕೆಳಗಿನಂತಿದೆ.

PG 2020-22 Abstract Gold Medal / Rank Faculty – wise

| Course | Male | | Female | | Total | |
|---|---|---|---|---|---|---|
| | Gold | Rank | Gold | Rank | Gold | Rank |
| Arts | 1 | 1 | 13 | 11 | 14 | 12 |
| Commerce | 1 | 1 | 8 | 6 | 9 | 7 |
| Science | 2 | 1 | 16 | 12 | 18 | 13 |
| Education | - | - | 1 | 1 | 1 | 1 |
| Total | 4 | 3 | 38 | 30 | 42 | 33 |

UG 2019-22 Abstract Gold Medal / Rank Faculty – wise

| Course | Male | | Female | | Total | |
|---|---|---|---|---|---|---|
| | Gold | Rank | Gold | Rank | Gold | Rank |
| Arts | - | 4 | 1 | 5 | 1 | 9 |
| Commerce | 3 | 2 | 3 | 8 | 6 | 10 |
| Science | - | 1 | 1 | 5 | 1 | 6 |
| Education | - | 1 | 1 | 1 | 1 | 2 |
| Total | 3 | 8 | 6 | 19 | 9 | 27 |

ಮೇಲೆ ತಿಳಿಸಿದ ಅಭ್ಯರ್ಥಿಗಳ ಅರ್ಹತಾ ಪಟ್ಟಿಗಳನ್ನು ಹಾಗೂ ಪ್ರಥಮ ರ್‍ಯಾಂಕ್ ಮತ್ತು ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ನಾತಕ ಮತ್ತು ಸ್ನಾತಕೋತ್ತರ, ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಎರಡನೇ ಘಟಿಕೋತ್ಸವದಲ್ಲಿ ವಿವಿಧ ಪದವಿಗಳನ್ನು ಸ್ವೀಕರಿಸಲು ಅರ್ಹರಾದ ಅಭ್ಯರ್ಥಿಗಳ ಪಟ್ಟಿಗೆ ಸರ್ವಾನುಮತದ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.**

**ಮಾನ್ಯ ಕುಲಾಧಿಪತಿಗಳು ಅನುಮೋದಿಸಿದ ಕೆಳಗೆ ನಮೂದಿಸಿದ ಗಣ್ಯರಿಗೆ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ ನೀಡಲು ಸಭೆ ಅನುಮೋದನೆ ನೀಡಿತು.**

1. **ಶ್ರೀ ನಿಸ್ಸಾರ್ ಅಹಮದ್ – ಡಾಕ್ಟರ್ ಆಫ್ ಲೆಟರ್ಸ್ (ಡಿ.ಲಿಟ್)–ಶಿಕ್ಷಣ**
2. **ಡಾ. ವೂಡೇ ಪಿ. ಕೃಷ್ಣ – ಡಾಕ್ಟರ್ ಆಫ್ ಲೆಟರ್ಸ್ (ಡಿ.ಲಿಟ್)–ಸಮಾಜ ಸೇವೆ**
3. **ಶ್ರೀಮತಿ ತಾರಿಣಿ ಚಿದಾನಂದ – ಡಾಕ್ಟರ್ ಆಫ್ ಲಿಟರೇಚರ್ (ಡಿ.ಲಿಟ್)–ಸಾಹಿತ್ಯ**

ಕುಲಸಚಿವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |
| ಸದಸ್ಯಕಾರ್ಯದರ್ಶಿಗಳು | ಸಭಾಧ್ಯಕ್ಷರು |

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು

ಅದರಂತೆ ಸ್ನಾತಕೋತ್ತರ ಹಾಗೂ ಸ್ನಾತಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಪ್ರಥಮ ರ್‍ಯಾಂಕ್ ಮತ್ತು ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಸಿದ್ದಪಡಿಸಿ ಅನುಮೋದನೆಗಾಗಿ ಮಂಡಿಸಿದೆ.

ಸಾರಾಂಶ ಕೆಳಗಿನಂತಿದೆ.

| PG 2020-22 Abstract Gold Medal / Rank Faculty – wise | | | | | | |
|---|---|---|---|---|---|---|
| Course | Male | | Female | | Total | |
| | Gold | Rank | Gold | Rank | Gold | Rank |
| Arts | 1 | 1 | 13 | 11 | 14 | 12 |
| Commerce | 1 | 1 | 8 | 6 | 9 | 7 |
| Science | 2 | 1 | 16 | 12 | 18 | 13 |
| Education | - | - | 1 | 1 | 1 | 1 |
| Total | 4 | 3 | 38 | 30 | 42 | 33 |

| UG 2019-22 Abstract Gold Medal / Rank Faculty – wise | | | | | | |
|---|---|---|---|---|---|---|
| Course | Male | | Female | | Total | |
| | Gold | Rank | Gold | Rank | Gold | Rank |
| Arts | - | 4 | 1 | 5 | 1 | 9 |
| Commerce | 3 | 2 | 3 | 8 | 6 | 10 |
| Science | - | 1 | 1 | 5 | 1 | 6 |
| Education | - | 1 | 1 | 1 | 1 | 2 |
| Total | 3 | 8 | 6 | 19 | 9 | 27 |

ಮೇಲೆ ತಿಳಿಸಿದ ಅಭ್ಯರ್ಥಿಗಳ ಅರ್ಹತಾ ಪಟ್ಟಿಗಳನ್ನು ಹಾಗೂ ಪ್ರಥಮ ರ್‍ಯಾಂಕ್ ಮತ್ತು ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ನಾತಕ ಮತ್ತು ಸ್ನಾತಕೋತ್ತರ, ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಎರಡನೇ ಘಟಿಕೋತ್ಸವದಲ್ಲಿ ವಿವಿಧ ಪದವಿಗಳನ್ನು ಸ್ವೀಕರಿಸಲು ಅರ್ಹರಾದ ಅಭ್ಯರ್ಥಿಗಳ ಪಟ್ಟಿಗೆ ಸರ್ವಾನುಮತದ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.**

**ಮಾನ್ಯ ಕುಲಾಧಿಪತಿಗಳು ಅನುಮೋದಿಸಿದ ಕೆಳಗೆ ನಮೂದಿಸಿದ ಗಣ್ಯರಿಗೆ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ ನೀಡಲು ಸಭೆ ಅನುಮೋದನೆ ನೀಡಿತು.**

1. **ಶ್ರೀ ನಿಸ್ಸಾರ್ ಅಹಮದ್ – ಡಾಕ್ಟರ್ ಆಫ್ ಲೆಟರ್ಸ್ (ಡಿ.ಲಿಟ್)–ಶಿಕ್ಷಣ**
2. **ಡಾ. ವೂಡೇ ಪಿ. ಕೃಷ್ಣ – ಡಾಕ್ಟರ್ ಆಫ್ ಲೆಟರ್ಸ್ (ಡಿ.ಲಿಟ್)–ಸಮಾಜ ಸೇವೆ**
3. **ಶ್ರೀಮತಿ ತಾರಿಣಿ ಚಿದಾನಂದ – ಡಾಕ್ಟರ್ ಆಫ್ ಲಿಟರೇಚರ್ (ಡಿ.ಲಿಟ್)–ಸಾಹಿತ್ಯ**

ಕುಲಸಚಿವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಕುಲಸಚಿವರು
ಸದಸ್ಯಕಾರ್ಯದರ್ಶಿಗಳು

ಕುಲಪತಿಗಳು
ಸಭಾಧ್ಯಕ್ಷರು